# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **13**
ಸದಸ್ಯರ ಹೆಸರು : ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 08-12-2025
ಉತ್ತರಿಸುವ ಸಚಿವರು : ಮಾನ್ಯ ಇಂಧನ ಸಚಿವರು

****

| | ಪ್ರಶ್ನೆ | ಉತ್ತರ |
|---|---|---|
| ಅ) | ಬಳ್ಳಾರಿ ಜಿಲ್ಲೆಯಲ್ಲಿ ಬಿಟಿಪಿಎಸ್ ಹಾಗು ಭೂ ಸ್ವಾಧೀನಪಡಿಸಿದ ಭೂಮಿಯನ್ನು ಸರ್ಕಾರದಿಂದ ಕೆ.ಪಿ.ಸಿ.ಎಲ್ ಪಡೆದಿರುವ ಒಟ್ಟು ಭೂಮಿಯ ವಿಸ್ತೀರ್ಣ ಎಷ್ಟು; ಭೂ ಸ್ವಾಧೀನವಾದ ಎಲ್ಲಾ ಜಮೀನುಗಳಿಗೆ ಪರಿಹಾರ ನೀಡಲಾಗಿದೆಯೇ; (ಪೂರ್ಣ ವಿವರದೊಂದಿಗೆ ಮಾಹಿತಿ ಒದಗಿಸುವುದು) | ಬಿಟಿಪಿಎಸ್‌ಗಾಗಿ ಒಟ್ಟು 1,800.92 ಎಕರೆ ಜಮೀನನ್ನು ಭೂ ಸ್ವಾಧೀನಪಡಿಸಿಕೊಳ್ಳಲಾಗಿದೆ. (ವಿವರವು **ಅನುಬಂಧ-1** ರಂತೆ ಇರುತ್ತದೆ.)<br>ಬಿಟಿಪಿಎಸ್ ಯೋಜನೆಗಾಗಿ ಒಟ್ಟು 1149.60 ಎಕರೆ ಖಾಸಗಿ ಜಮೀನನ್ನು ಭೂ ಸ್ವಾಧೀನ ಮಾಡಿಕೊಂಡಿದ್ದು, ಇದುವರೆವಿಗೆ ಒಟ್ಟು 21.54 ಕೋಟಿ ಭೂ ಪರಿಹಾರ ನೀಡಲಾಗಿದೆ. |
| ಆ) | ಬಳ್ಳಾರಿ ಜಿಲ್ಲೆಯ ಕೈಗಾರಿಕಾ ಉದ್ದೇಶಕ್ಕಾಗಿ ಭೂ ಸ್ವಾಧೀನಗೊಂಡ ರೈತರ ಜಮೀನುಗಳಿಗೆ ಭೂ ಪರಿಹಾರ ಮತ್ತು ಸಂತ್ರಸ್ಥ ಕುಟುಂಬದವರಿಗೆ ಉದ್ಯೋಗಾವಕಾಶ ಕಲ್ಪಿಸುವ ಅವಕಾಶ ಇದೆಯೇ; (ಸರ್ಕಾರಿ ಆದೇಶವನ್ನು ಒದಗಿಸುವುದು) | ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರ ನಿರ್ಮಾಣಕ್ಕಾಗಿ ಭೂಮಿ ಕಳೆದುಕೊಂಡ ಅರ್ಹ ಭೂ ಸಂತ್ರಸ್ಥ ಅಭ್ಯರ್ಥಿಗಳಿಗೆ ತರಬೇತಿ/ಉದ್ಯೋಗ ನೀಡುವ ಸಲುವಾಗಿ ಸರ್ಕಾರಿ ನಿಯಮಗಳು ಹಾಗೂ ನಿಗಮದ ಮಾನದಂಡಗಳನ್ನು ನಿಗಮದ ನಿರ್ದೇಶಕ ಮಂಡಳಿಯ ಅನುಮೋದನೆ/ ನಿರ್ಣಯದಂತೆ (Board Resolutions) ಭೂ ಸಂತ್ರಸ್ಥ ಅಭ್ಯರ್ಥಿಗಳಿಗೆ ತರಬೇತಿ/ಉದ್ಯೋಗ ನೀಡುವ ಯೋಜನೆಯನ್ನು ರೂಪಿಸಲಾಗಿರುತ್ತದೆ, |
| ಇ) | ಬಿಟಿಪಿಎಸ್‌ಗಾಗಿ ಭೂ ಸ್ವಾಧೀನವಾದ ಎಲ್ಲಾ ಜಮೀನುಗಳ ಸಂತ್ರಸ್ಥ ಕುಟುಂಬದವರಿಗೆ ಉದ್ಯೋಗಾವಕಾಶ ಕಲ್ಪಿಸಲಾಗಿದೆಯೇ; ಅರ್ಹರಿರುವ ಜಮೀನುದಾರರ ವಿವರಗಳನ್ನು ನೀಡುವುದು; | ಸರ್ಕಾರ/ನಿಗಮದ ಮಾನದಂಡಗಳನ್ನು ಪೂರೈಸಿದ ಅರ್ಹ ಭೂ ಸಂತ್ರಸ್ಥರಿಗೆ ತರಬೇತಿ/ಉದ್ಯೋಗ ಕಲ್ಪಿಸಲಾಗಿದೆ. (ವಿವರವು **ಅನುಬಂಧ-2** ರಂತೆ ಇರುತ್ತದೆ.) |
| ಈ) | ಭೂ ಸ್ವಾಧೀನಗೊಂಡ ಜಮೀನುಗಳ ಕಾನೂನು ಪರವಾದ ವಾರಸುದಾರರಿಗೆ ಉದ್ಯೋಗ ನೀಡದಿರುವ ಪ್ರಕರಣಗಳ ಸಂಖ್ಯೆ ಎಷ್ಟು; (ವಿವರ ನೀಡುವುದು) ಉದ್ಯೋಗ ನೀಡದಿರಲು ಅಥವಾ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು ಇದಕ್ಕೆ ಕಾರಣವೇನು; (ವಿವರದೊಂದಿಗೆ ಮಾಹಿತಿ ನೀಡುವುದು) | ಭೂ ಸಂತ್ರಸ್ಥ ಅಭ್ಯರ್ಥಿಗಳಿಗೆ ತರಬೇತಿ/ಉದ್ಯೋಗ ನೀಡುವ ಯೋಜನೆ ಅಡಿಯಲ್ಲಿ ಒಟ್ಟು 293 ಅರ್ಹ ಭೂ ಸಂತ್ರಸ್ಥ ಕುಟುಂಬಗಳಲ್ಲಿ ನಿಗಮದಲ್ಲಿ ಅಳವಡಿಸಿಕೊಳ್ಳಲಾದ ನಿಯಮಾವಳಿಗಳು ಹಾಗೂ ಮಾನದಂಡಗಳನ್ವಯ ಅರ್ಹತೆ ಹೊಂದಿರುವ 169 ಭೂ ಸಂತ್ರಸ್ಥ ಅಭ್ಯರ್ಥಿಗಳಿಗೆ ತರಬೇತಿ/ ಉದ್ಯೋಗವನ್ನು ಒದಗಿಸಲಾಗಿರುತ್ತದೆ ಹಾಗೂ ನಿಗಮದ ನಿಯಮಾವಳಿಗಳು ಹಾಗೂ ಅರ್ಹತಾ ಮಾನದಂಡಗಳನ್ನು ಪೂರೈಸುವ ಭೂ ಸಂತ್ರಸ್ಥ ಅಭ್ಯರ್ಥಿಗಳ ಕಡತಗಳು ಪ್ರಕ್ರಿಯೆಯಲ್ಲಿರುತ್ತವೆ. |

| | | |
|---|---|---|
| ಉ) | ಬಿಟಿಪಿಎಸ್ ನಿಂದ ಸಂತ್ರಸ್ಥ ಕುಟುಂಬದವರಿಗೆ ಉದ್ಯೋಗಾವಕಾಶ ತ್ವರಿತಗತಿಯಲ್ಲಿ ನೀಡಲು ಇರುವ ತೊಡಕುಗಳೇನು? (ಮಾಹಿತಿ ಒದಗಿಸುವುದು) | ಭೂ ಸಂತ್ರಸ್ಥ ಅಭ್ಯರ್ಥಿಗಳಿಗೆ ತರಬೇತಿ/ಉದ್ಯೋಗ ನೀಡುವ ಯೋಜನೆ ಅಡಿಯಲ್ಲಿ ನಿಗಮದಲ್ಲಿ ಅಳವಡಿಸಿಕೊಳ್ಳಲಾದ ನಿಯಮಾವಳಿಗಳು ಹಾಗೂ ಮಾನದಂಡಗಳನ್ವಯ ಅರ್ಹತೆ ಹೊಂದಿರುವ ಭೂ ಸಂತ್ರಸ್ಥ ಅಭ್ಯರ್ಥಿಗಳಿಗೆ ಯಾವುದೇ ತೊಡಕುಗಳಿಲ್ಲದಂತೆ ತ್ವರಿತ ಗತಿಯಲ್ಲಿ ತರಬೇತಿ/ಉದ್ಯೋಗವನ್ನು ಒದಗಿಸಲಾಗುತ್ತಿರುತ್ತದೆ. |

ಸಂಖ್ಯೆ: ಎನರ್ಜಿ 277 ಇಬಿಎಸ್ 2025

(ಕೆ.ಜೆ.ಜಾರ್ಜ್)
ಇಂಧನ ಸಚಿವರು

ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ವೈ.ಎಂ.ಸತೀಶ್ ರವರ ಚುಕ್ಕೆ ಗುರುತಿಲ್ಲದ
ಪ್ರಶ್ನೆ ಸಂಖ್ಯೆ:13 ಕ್ಕೆ ಅನುಬಂಧ-1

## LAND ACQUIRED FOR THE CONSTRUCTION OF BTPS PROJECT

| SL.NO. | LAND DETAILS | ACRES |
|---|---|---|
| 1 | PRIVATE LAND | 1149.60 |
| 2 | VSL LAND | 549.27 |
| 3 | RAILWAY SIDING | 35.72 |
| 4 | GOVT. LAND | 46.33 |
| 5 | GOVT. LAND (R-HALLA) | 20.00 |
| | **TOTAL LAND** | **1800.92** |

**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ವೈ.ಎಂ.ಸತೀಶ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:13 ಕ್ಕೆ ಅನುಬಂಧ-2**

**ಬಿಟಿಪಿಎಸ್‌ಗಾಗಿ ಭೂಮಿ ಕಳೆದುಕೊಂಡ ಭೂ ಸಂತ್ರಸ್ಥ ಕುಟುಂಬಗಳ ವಿವರಗಳು**

| | | |
|---|---|---|
| 1 | ಒಟ್ಟು ಭೂ ಸಂತ್ರಸ್ಥ ಕುಟುಂಬಗಳು<br>(ಜಿಲ್ಲಾಧಿಕಾರಿಗಳ ವರದಿಯನ್ವಯ) | 293 |
| 2 | ನಿಗಮದಿಂದ ಉದ್ಯೋಗ ನೀಡಲಾದ ಭೂ ಸಂತ್ರಸ್ಥ ಕುಟುಂಬಗಳು | 166 |
| 3 | ಪ್ರಸ್ತುತ ತರಬೇತಿ ಪಡೆಯುತ್ತಿರುವ ಭೂ ಸಂತ್ರಸ್ಥ ಅಭ್ಯರ್ಥಿಗಳು | 03 |
| 4 | ಉಳಿದ ಕುಟುಂಬಗಳು<br>(ಪ್ರಕ್ರಿಯೆಯಲ್ಲಿರುವ ಪ್ರಕರಣಗಳು,<br>ನಿಗಮದಿಂದ ಹಿಂಬರಹ ನೀಡಲಾದ ಪ್ರಕರಣಗಳು,<br>ನ್ಯಾಯಾಲಯದಲ್ಲಿರುವ ಪ್ರಕರಣಗಳು,<br>ಕುಟುಂಬ ವ್ಯಾಖ್ಯಾನದಲ್ಲಿ ಬರದ ಪ್ರಕರಣಗಳು,<br>ಕನಿಷ್ಠ ಭೂ ಒಡೆತನ ಹೊಂದಿರದ ಪ್ರಕರಣಗಳು) | 124 |